RNU AIR DHARWAD

# JUNE 03, 2024

## ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ವಿಧಾನಪರಿ ’ತ್, ಮೂರು ಪದವಿಧರ ಹಾಗೂ ಮೂರು ಶಿಕ್ಷಕರ ಮತಕ್ಷೇತ್ರಗಳಿಗೆ, ಇಂದು ಬೆಳಗ್ಗೆ 8 ಗಂಟೆಯಿಂದ ಮತದಾನ.**
- **ರಾಜ್ಯದ 28 ಲೋಕಸಭಾ ಮತಕ್ಷೇತ್ರಗಳ, ಮತ ಎಣಿಕೆ ನಾಳೆ, ಜಿಲ್ಲಾಡಳಿತಗಳಿಂದ ಸಕಲ ಸಿದ್ಧತೆ.**
- **ದಿನಾಂಕ 13 ರಂದು, ವಿಧಾನಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆ; ನಾಮಪತ್ರ ಸಲ್ಲಿಸಲು ಇಂದು ಕಡೆ ದಿನ.**
- **ಮಲೆನಾಡು ಗಿಡ್ಡ ರೈತ ಉತ್ಪಾದಕರ ಸಂಘ, ಸಾಗರದಲ್ಲಿ ಆಯೋಜಿಸಿದ್ದ, ‘ಹಪ್ಪಳ ಕಂಬಳ’ ಯಶಸ್ವಿ.**

<><><>

**ಈಗ ವಾರ್ತೆಗಳ ವಿವರ**

<><><>

**ಇಂದು ಸೋಮವಾರ, ಜೂನ್ 3 ರಂದು, ವಿಧಾನ ಪರಿ ’ತ್ತಿನ, ಮೂರು ಪದವಿಧರ ಹಾಗೂ ಮೂರು ಶಿಕ್ಷಕರ ಮತ ಕ್ಷೇತ್ರಗಳಿಗೆ, ಬೆಳಗ್ಗೆ 8 ರಿಂದ ಸಂಜೆ 4 ಗಂಟೆಯ ವರೆಗೆ ಮತದಾನ ನಡೆಯಲಿದೆ. ಈ 6 ಕ್ಷೇತ್ರಗಳ ವ್ಯಾಪ್ತಿಯ ಜಿಲ್ಲೆಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ, ಅರ್ಹ ಉದ್ಯೋಗಿ ಮತದಾರರಿಗೆ, ಸಾಂದರ್ಭಿಕ ರಜೆ ಘೋಷಿಸಲಾಗಿದೆ. ಆರು ಕ್ಷೇತ್ರಗಳಲ್ಲಿ ಒಟ್ಟು 77 ಪುರುಷ ಹಾಗೂ ಓರ್ವ ಮಹಿಳಾ ಅಭ್ಯರ್ಥಿ ಸೇರಿ, 78 ಜನ ಕಣದಲ್ಲಿದ್ದಾರೆ. ಒಟ್ಟು ಮೂರು ಲಕ್ಷದ 63 ಸಾವಿರದ 573 ಮಂದಿ ಮತದಾರರು ಹೆಸರು ನೊಂದಾಯಿಸಿದ್ದಾರೆ.**

<><><>

ಯಾದಗಿರಿ ಜಿಲ್ಲೆ, ಸುರಪುರ ವಿಧಾನಸಭಾ ಕ್ಷೇತ್ರದ, ಉಪ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆ, ನಾಳೆ ಜೂನ್ 4 ರಂದು, ಜರುಗಲಿದೆ. ಜಿಲ್ಲಾಡಳಿತ ಲೋಕಸಭೆಯ ಮತ ಎಣಿಕೆಗೂ ಅಗತ್ಯ ಪೂರ್ವ ಸಿದ್ಧತೆ ಕೈಗೊಂಡಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ಬಿ. ಸುಶೀಲಾ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

1. ಯಾದಗಿರಿ ಜಿಲ್ಲಾಧಿಕಾರಿ ಬಿ. ಸುಶೀಲಾ ಧ್ವನಿ 42 ಸೆಕೆಂದುಗಳು

<><><>

ದಾವಣಗೆರೆ ಲೋಕಸಭಾ ಕ್ಷೇತ್ರದ ಮತ ಎಣಿಕೆ, ದಾವಣಗೆರೆ ವಿಶ್ವವಿದ್ಯಾಲಯ ಆವರಣದ, ಶಿವಗಂಗೋತ್ರಿಯಲ್ಲಿ ನಾಳೆ, ಮಂಗಳವಾರ, ಬೆಳಿಗ್ಗೆ 8 ಗಂಟೆಯಿಂದ ಆರಂಭವಾಗಲಿದೆ; 19 ಸುತ್ತುಗಳಲ್ಲಿ ಮತ ಎಣಿಕೆ ನಡೆಯಲಿದೆ ಎಂದು, ಜಿಲ್ಲಾಧಿಕಾರಿ ಎಂ.ವಿ.ವೆಂಕಟೇಶ್ ತಿಳಿಸಿದ್ದಾರೆ.

<><><>

ಹಾವೇರಿ ಲೋಕಸಭಾ ಕ್ಷೇತ್ರದ ಮತ ಎಣಿಕೆಯ ಭದ್ರತೆಗಾಗಿ, ನಾಲ್ವರು ಉಪ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ, ರಾಜ್ಯ ಮೀಸಲು ಪೊಲೀಸ್ ಪಡೆಯ 2 ತುಕಡಿಗಳು ಹಾಗೂ 5 ಜಿಲ್ಲಾವ ಸಶಸ್ತ್ರ ಮೀಸಲು ಪಡೆಯ ತುಕಡಿಗಳನ್ನು, ನಿಯೋಜಿಸಲಾಗಿದೆ ಎಂದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.

<><><>

ಧಾರವಾಡ ಲೋಕಸಭಾ ಮತ ಕ್ಷೇತ್ರದ, ಸಾರ್ವತ್ರಿಕ ಚುನಾವಣೆಯ ಮತ ಎಣಿಕೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆಯಲಿದ್ದು, ಮತ ಎಣಿಕೆ ಕೇಂದ್ರದ ಸುತ್ತ ಬಿಗಿ ಭದ್ರತೆ ಕಲ್ಪಿಸಲಾಗಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ದಿವ್ಯಾ ಪ್ರಭು, ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

<><><>

2. ಜಿಲ್ಲಾ ಚುನಾವಣಾಧಿಕಾರಿ ದಿವ್ಯಾ ಪ್ರಭು ಧ್ವನಿ 35 ಸೆಕೆಂದುಗಳು

<><><>

ಅತೀ ಹೆಚ್ಚು ಬ್ಯಾಲೆಟ್ ಮತಗಳ ಎಣಿಕೆ ಸೇರಿದಂತೆ, ಬೆಳಗಾವಿ ಲೋಕಸಭಾ ಕ್ಷೇತ್ರದ ಮತ ಎಣಿಕೆ, ಬೆಳಗಾವಿಯ ಆರ್.ಪಿ.ಡಿ. ಕಾಲೇಜಿನಲ್ಲಿ ಹಾಗೂ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಮತ ಎಣಿಕೆ, ಚಿಕ್ಕೋಡಿಯ ಆರ್.ಡಿ. ಕಾಲೇಜಿನಲ್ಲಿ ನಡೆಯಲಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ನಿತೇಶ್ ಪಾಟೀಲ ತಿಳಿಸಿದ್ದಾರೆ.

<><><>

3. ಜಿಲ್ಲಾ ಚುನಾವಣಾಧಿಕಾರಿ ನಿತೇಶ ಪಾಟೀಲ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇದೇ ತಿಂಗಳ 13, ಗುರುವಾರ, ವಿಧಾಸಭೆಯಿಂದ ವಿಧಾನಪರಿಷತ್ತಿಗೆ ನಡೆಯಲಿರುವ, ದ್ವೈವಾರ್ಷಿಕ ಚುನಾವಣೆಗೆ, ನಾಮಪತ್ರ ಸಲ್ಲಿಕೆಗೆ ಇಂದು ಕಡೆಯ ದಿನ. ಬಿಜೆಪಿಯಿಂದ, ಮಾಜಿ ಸಚಿವ ಸಿ.ಟಿ.ರವಿ, ಪರಿಷತ್ ಮುಖ್ಯ ಸಚೇತಕ ಎನ್. ರವಿಕುಮಾರ್ ಹಾಗೂ ಮಾಜಿ ಶಾಸಕ ಎಂ.ಜಿ.ಮುಳೆ ಅವರನ್ನು ಅಭ್ಯರ್ಥಿಯಾಗಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಘೋಷಿಸಿದ್ದಾರೆ.

<><><>

ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅನುಮೋದಿಸಿದ, 8 ಜನ ಅಭ್ಯರ್ಥಿಗಳ ಪಟ್ಟಿಯನ್ನು, ಪಕ್ಷದ ಪ್ರಧಾನ ಕಾರ್ಯದರ್ಶಿ, ಕೆ.ಸಿ.ವೇಣುಗೋಪಾಲ್ ಪ್ರಕಟಿಸಿದ್ದಾರೆ. ಸಚಿವ ಎನ್.ಎಸ್.ಬೋಸರಾಜು, ವಸಂತಕುಮಾರ, ಯತೀಂದ್ರ ಸಿದ್ದರಾಮಯ್ಯ ಕೆ.ಗೋವಿಂದರಾಜು, ಐವಾನ್ ಡಿಸೋಜಾ, ಬಿಲ್ಕಿಸ್ ಬಾನು, ಜಗದೇವ ಗುತ್ತೇದಾರ ಅವರಿಗೆ ಟಿಕೆಟ್ ನೀಡಲಾಗಿದೆ. ಕಾಂಗ್ರೆಸ್ ನಿಂದ ವಿಧಾನಪರಿಷತ್ ಸದಸ್ಯರಾಗಿದ್ದ, ಜಗದೀಶ್ ಶೆಟ್ಟರ್ ಅವರ ರಾಜಿನಾಮೆಯಿಂದ ತೆರವಾದ ಸ್ಥಾನಕ್ಕೆ, ಬಸನಗೌಡ ಬಾದರ್ಲಿ ಅವರನ್ನು ಅಭ್ಯರ್ಥಿಯನ್ನಾಗಿ ಘೋಷಿಸಲಾಗಿದೆ ಎಂದು, ಪಕ್ಷದ ಮೂಲಗಳು ತಿಳಿಸಿವೆ.

<><><>

ವಿಧಾನಸಭೆಯಿಂದ ವಿಧಾನಪರಿಷತ್ತಿನ 11 ಸ್ಥಾನಗಳಿಗೆ, ಇದೇ 13 ರಂದು ನಡೆಯಲಿರುವ ಚುನಾವಣೆಗೆ, ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿವೆ. ನಾಮಪತ್ರ ಸಲ್ಲಿಕೆಗೆ ಇಂದು, ಕಡೆಯ ದಿನವಾಗಿದೆ. ಸಾಮಾಜಿಕ ನ್ಯಾಯ, ಪ್ರಾದೇಶಿಕ ಸಮತೋಲನ ಮತ್ತು ಪಕ್ಷ ನಿಷ್ಠೆಯನ್ನು ಗಮನದಲ್ಲಿಟ್ಟುಕೊಂಡು, ಅಭ್ಯರ್ಥಿಗಳ ಆಯ್ಕೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಒತ್ತು ನೀಡಿವೆ. ಒಟ್ಟು 11 ಸ್ಥಾನಗಳಲ್ಲಿ, ಆಯಾ ಪಕ್ಷಗಳ ಶಾಸಕರ ಸಂಖ್ಯಾಬಲಕ್ಕೆ ಅನುಗುಣವಾಗಿ, ಕಾಂಗ್ರೆಸ್ 7, ಬಿಜೆಪಿ 3 ಮತ್ತು ಜೆಡಿಎಸ್ 1 ಸ್ಥಾನ ಗೆಲ್ಲಲು ಅವಕಾಶವಿದೆ.

<><><>

ಹಲಸು, ಬಾಳೆಕಾಯಿ, ಅಕ್ಕಿ, ಉದ್ದು, ಗೆಣಸು ಹಾಗೂ ಸಿರಿಧಾನ್ಯಗಳಿಂದ ತಯಾರಿಸಿದ, ಥರಾವರಿ ಹಪ್ಪಳಗಳ ಸವಿ ರುಚಿ ಮತ್ತು ಮಾರಾಟ, ಗಮನ ಸೆಳೆದಿದೆ ಎಂದು, ಮೇಳದ ಸಂಯೋಜಕ ಬಂದಗದ್ದೆ ರಾಧಾಕೃಷ್ಣ ತಿಳಿಸಿದ್ದಾರೆ. ಶಿವಮೊಗ್ಗ ಜಿಲ್ಲೆ ಸಾಗರದಲ್ಲಿ, ಮಲೆನಾಡು ಗಿಡ್ಡ ರೈತ ಉತ್ಪಾದಕರ ಸಂಘದ ನೇತೃತ್ವದಲ್ಲಿ, ಈ ಹಪ್ಪಳದ ಕಂಬಳ ಆಯೋಜಿತವಾಗಿತ್ತು. ಸ್ಥಳದಲ್ಲೇ ತಯಾರಿಸಲಾದ ಹೊಗ್ಗೆ ಹಪ್ಪಳ ಜನಾಕರ್ಷಣೆಗೆ ಪಾತ್ರವಾಯಿತು. ಹಲಸಿನ ಹಣ್ಣಿನ ಹೋಳಿಗೆ, ವಿವಿಧ ಕಷಾಯ ಹಾಗೂ ಪಾನೀಯಗಳನ್ನು ಪ್ರದರ್ಶಿಸಲಾಯಿತು. ಶಿವಮೊಗ್ಗ ಸೇರಿದಂತೆ, ಹೊರ ಜಿಲ್ಲೆಗಳಿಂದಲೂ ಹಪ್ಪಳ ತಯಾರಕರು ಮೇಳದಲ್ಲಿ ಪಾಲ್ಗೊಂಡಿದ್ದರು.

<><><>

ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆ, ಕರ್ನಾಟಕ–ಆಂಧ್ರ ರಾಜ್ಯಗಳ ಗಡಿಗೆ ಹೊಂದಿಕೊಂಡ, ಸಂಡೂರು ತಾಲೂಕು ವ್ಯಾಪ್ತಿಯ, 4 ಗಣಿಗಳ ಜಂಟಿ ಸಮೀಕ್ಷೆಯನ್ನು, ಎರಡೂ ರಾಜ್ಯಗಳ ಅಧಿಕಾರಿಗಳು, ಪೂರ್ಣಗೊಳಿಸಿದ್ದಾರೆ. ಬಳ್ಳಾರಿ ಭಾಗದ ಹೊನ್ನಳ್ಳಿ ಮತ್ತು ಓಬಳಾಪುರಂ ನಡುವಿನ ಗಡಿ ಭಾಗದ ಮೂರು ಗಣಿಗಳ ಸಮೀಕ್ಷೆ, ಈಗ ಆರಂಭಗೊಂಡಿದೆ. ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಜ್ಞರ ತಂಡ, ಅಂತಾರಾಜ್ಯ ಭೂ ದಾಖಲೆ ಇಲಾಖೆ, ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳ ಅಧಿಕಾರಿಗಳು, ಸಮನ್ವಯದಿಂದ, ಕಳೆದ ಮೇ 29 ರಿಂದ, ಗಣಿಗಳ ಸಮೀಕ್ಷೆ ಆರಂಭಿಸಿದ್ದಾರೆ. ಗುರುವಾರ ದಿನಾಂಕ 6 ರೊಳಗೆ, ಏಳು ಗಣಿ ಪ್ರದೇಶಗಳ ಸಮೀಕ್ಷೆ ಪೂರ್ಣಗೊಳ್ಳಲಿದೆ. ಬಳಿಕ ವರದಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಈ ತಂಡ ಸಲ್ಲಿಸಲಿದೆ.

<><><>

ರಾಜ್ಯದ ಕರಾವಳಿಗೆ ಮುಂಗಾರು ಪ್ರವೇಶವಾಗಲಿದೆ. 7 ಜಿಲ್ಲೆಗಳಲ್ಲಿ ಬಿರುಸಿನ ಮಳೆಯಾಗಲಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರಾವಳಿ ಮತ್ತು ಉತ್ತರ ಒಳನಾಡಿನ ಜಿಲ್ಲೆಯಲ್ಲಿ ಭಾರೀ ಮಳೆಯಾಗಲಿದ್ದು, ದಕ್ಷಿಣ ಒಳನಾಡಿನ ಹಾಸನ, ಕೊಡಗು, ಮಂಡ್ಯ ಮತ್ತು ಮೈಸೂರು ಜಿಲ್ಲೆಗೆ ಆರೆಂಜ್ ಅಲರ್ಟ್ ಹಾಗೂ ರಾಮನಗರ, ತುಮಕೂರು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

<><><>

ಶಿವಮೊಗ್ಗ ಜಿಲ್ಲೆ, ಸಾಗರದ ಇತಿಹಾಸ ಸಂಶೋಧಕ, ಕೆಳದಿ ಗುಂಡಾ ಜೋಯಿಸ್ ನಿಧನರಾಗಿದ್ದಾರೆ. ಅವರಿಗೆ 94 ವರ್ಷ ವಯಸ್ಸಾಗಿತ್ತು. ಕೆಳದಿ ವಸ್ತು ಸಂಗ್ರಹಾಲಯ ಸ್ಥಾಪನೆಯಲ್ಲಿ, ಗುಂಡಾ ಜೋಯಿಸರು ಪ್ರಮುಖ ಪಾತ್ರ ವಹಿಸಿದ್ದರು. ತಿಗಳಾರಿ ಹಾಗೂ ಮೋಡಿ ಲಿಪಿ ಪರಿಣಿತರಾಗಿದ್ದ ಗುಂಡಾ ಜೋಯಿಸರು, 'ಹುಬ್ಬಳ್ಳಿ ಮೂರುಸಾವಿರ ಮಠದ ಶಾಸನ ಸಂಪುಟ' ಸೇರಿದಂತೆ, 40ಕ್ಕೂ ಹೆಚ್ಚು ಮೌಲಿಕವಾದ ಐತಿಹಾಸಿಕ ಕೃತಿಗಳನ್ನು ರಚಿಸಿದ್ದಾರೆ. 1979ರಲ್ಲಿ ಅವರು, ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇಂದು ಬೆಳಗ್ಗೆ 9 ಗಂಟೆಗೆ, ಸಾಗರದ ಮಾರಿಕಾಂಬಾ ರುದ್ರಭೂಮಿಯಲ್ಲಿ ಪಾರ್ಥಿವ ಶರೀರದ ಅಂತ್ಯಕ್ರಿಯೆ ಜರುಗಲಿದೆ.

<><><>

ಮಂಗಳೂರಿನ ಸಸಿಹಿತ್ಲು ಬಳಿಯ, ಮುಂಡಾ ಬಂದರಿನಲ್ಲಿ, ಭಾನುವಾರ ಸಮಾರೋಪಗೊಂಡ, 3 ದಿನಗಳ, ರಾಷ್ಟ್ರೀಯ ಓಪನ್ ಸರ್ಫಿಂಗ್ ಚಾಂಪಿಯನ್‌ಶಿಪ್‌ನಲ್ಲಿ, ತಮಿಳುನಾಡಿನ ಕಮಲಿ ಮೂರ್ತಿ, ಮಹಿಳೆಯರ ಮತ್ತು ಬಾಲಕಿಯರ ವಿಭಾಗದಲ್ಲಿ, 2ನೇ ಬಾರಿಗೆ ಚಾಂಪಿಯನ್ ಆಗಿದ್ದಾರೆ. ಪುರುಷರ ವಿಭಾಗದಲ್ಲಿ, ಅಂತಾರಾಷ್ಟ್ರೀಯ ಸರ್ಫರ್, ತಮಿಳುನಾಡಿನ ಅಜೀಶ್ ಅಲಿ ಹಾಗೂ ಬಾಲಕರ ವಿಭಾಗದಲ್ಲಿ, ತಯಿನ್ ಅರುಣ್ ಪ್ರಥಮ ಸ್ಥಾನ ಗಳಿಸಿದರು. ಕರ್ನಾಟಕದ ಪ್ರದೀಪ್ ಪೂಜಾರ 4ನೇ ಸ್ಥಾನ ಪಡೆದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಚಿಕ್ಕಬಳ್ಳಾಪುರದ ಪ್ರವಾಸಿ ತಾಣ, ನಂದಿಗಿರಿ ಧಾಮಕ್ಕೆ, ಬೆಳಿಗ್ಗೆ 5.30 ರಿಂದ ಸಂಜೆ 6.30ರ ವರೆಗೆ, ಪ್ರವಾಸಿಗರು ಭೇಟಿ ನೀಡಬಹುದು ಎಂದು, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ತಿಳಿಸಿದ್ದಾರೆ.

<><><>

ಪರಿಸರ ವಿಶ್ವ ದಿನದ ಅಂಗವಾಗಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಾಲಾ ಮಕ್ಕಳಿಗಾಗಿ, ನಾಳೆ ಮಂಗಳವಾರ 4ನೇ ತಾರೀಖು, ಬೆಳಿಗ್ಗೆ 10 ಗಂಟೆಗೆ, ಬೆಂಗಳೂರಿನ ಕಬ್ಬನ್ ಉದ್ಯಾನವನದ, ಜವಹರ ಬಾಲ ಭವನದಲ್ಲಿ, ಚಿತ್ರಕಲಾ ಮತ್ತು ಪ್ರಬಂಧ ಸ್ಪರ್ಧೆ ಏರ್ಪಡಿಸಿದೆ.

<><><>

ಬೆಂಗಳೂರಿನ, ಡಾಕ್ಟರ್ ಬಿ. ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ– ವಿಶ್ವವಿದ್ಯಾಲಯದ, ಪ್ರಥಮ ವಾರ್ಷಿಕ ಘಟಿಕೋತ್ಸವ, ಜೂನ್ 19 ರಂದು ಬೆಳಗ್ಗೆ 11.30ಕ್ಕೆ, ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಜರುಗಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ವಿಧಾನಪರಿ ’ತ್, ಮೂರು ಪದವಿಧರ ಹಾಗೂ ಮೂರು ಶಿಕ್ಷಕರ ಮತಕ್ಷೇತ್ರಗಳಿಗೆ, ಇಂದು ಬೆಳಗ್ಗೆ 8 ಗಂಟೆಯಿಂದ ಮತದಾನ.**
- **ರಾಜ್ಯದ 28 ಲೋಕಸಭಾ ಮತಕ್ಷೇತ್ರಗಳ, ಮತ ಎಣಿಕೆ ನಾಳೆ, ಜಿಲ್ಲಾಡಳಿತಗಳಿಂದ ಸಕಲ ಸಿದ್ಧತೆ.**
- **ದಿನಾಂಕ 13 ರಂದು, ವಿಧಾನಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆ; ನಾಮಪತ್ರ ಸಲ್ಲಿಸಲು ಇಂದು ಕಡೆ ದಿನ.**
- **ಮಲೆನಾಡು ಗಿಡ್ಡ ರೈತ ಉತ್ಪಾದಕರ ಸಂಘ, ಸಾಗರದಲ್ಲಿ ಆಯೋಜಿಸಿದ್ದ, ‘ಹಪ್ಪಳ ಕಂಬಳ’ ಯಶಸ್ವಿ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**